O.S.No.: 392/2013

P.W-2

ಈ ದಿನ ದಿನಾಂಕಃ **.30.06.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ- 1 ರಿಂದ 5 ನೇ ಪ್ರತಿವಾದಿಗಳ ಪರ ಶ್ರೀ. ಆರ್.ಸಿ ವಕೀಲರಿಂದಃ</u>**

ಮೃತ ವಾದಿಗೆ ಸುಪ್ರಿತ ಎಂಬ ಒಬ್ಬ ಅಕ್ಕ ಇದ್ದಾರೆ ಸಾಕ್ಷಿ ಮುಂದುವರಿದು ಅವರಿಗೆ ಮದುವೆ ಆಗಿದೆ. ಮೃತ ವಾದಿ ತೀರಿಕೊಂಡ ನಂತರ ಆಕೆಯನ್ನು ಈ ಪ್ರಕರಣದಲಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಮೃತ ವಾದಿ ಸೈಟನ್ನು ಪ್ರತಿವಾದಿಯ ಬಳಿ ಖರೀದಿ ಮಾಡಿದ್ದ ನಂತರ ಹಣ ವಾಪಸ್ಸು ಕೇಳಿದಾಗ ಕೊಡುವುದಿಲ್ಲ ಎಂದು ಹೇಳಿದ್ದರಿಂದ ಈ ದಾವೆ ದಾಖಲಿಸಿದ್ದ. ಮೃತ ವಾದಿ ಈ ದಾವೆಯನ್ನು ರಾಮೇಗೌಡ ಮತ್ತು ಗೌರಮ್ಮರವರ ಮೇಲೆ ದಾಖಲಿಸಿದ್ದಾನೆ.ಸಾತನೂರು ಗ್ರಾಮದ ಖಾ.ನಂ. 745 ಮತ್ತು ಆಸ್ತಿ ಸಂಃ 1149/3 ಕ್ಕೆ ಸಂಬಂಧಿಸಿದಂತೆ ಈ ದಾವೆ ದಾಖಲಿಸಿದ್ದಾರೆ. ಉಃ ದಃ 18 ಮೀಟರ್ ಪೂಃ ಪ 12.2 ಮೀಟರ್. ನಾನು 10 ನೇ ತರಗತಿ ಓದಿದ್ದೇನೆ. ನಾನು ವಾಸ ಮಾಡುವ ಊರಿನಲ್ಲಿ ಆಸ್ತಿ ಇದೆ ಅದರ ಸಂಃ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಚಕ್ಕುಬಂದಿ ಗೊತ್ತು. ಪೂಃ ಪುಟ್ಟಸ್ವಾಮಿರವರ ಆಸ್ತಿ, ಪಃ ಚಿಕ್ಕಮಾದಯ್ಯ ರವರ ಹಿತ್ತಲು , ಉಃ ರಸ್ತೆ , ದಃ ಚಲುವೇಗೌಡರ ಮನೆ.

2. ನಾನು ಮತ್ತು ಮೃತ ವಾದಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ಮೃತ ವಾದಿ ಸಾತನೂರಿನಲ್ಲಿ ಪೆಟ್ರೋಲ್ ಬಂಕ್ ಇಟ್ಟುಕೊಂಡಿದ್ದ. ಪೆಟ್ರೋಲ್ ಬಂಕ್ ಸುಮಾರು 40 ಗುಂಟೆ ಆಸ್ತಿಯಲ್ಲಿ ಇದೆ. ಸಾಕ್ಷಿ ಮುಂದುವರಿದು ಅದನ್ನು ಭೋಗ್ಯಕ್ಕೆ ಮೃತ ವಾದಿ ತೆಗೆದುಕೊಂಡಿದ್ದ. ದಾವಾ ಆಸ್ತಿ ಸಾತನೂರಿನಲ್ಲಿದೆ ಎಂದರೆ ಸರಿ. ದಾವ ಆಸ್ತಿ ಮತ್ತು ಪೆಟ್ರೋಲ್ ಬಂಕ್ ಇರುವ ಆಸ್ತಿಯ ಒಂದು ಚದರ ಅಡಿಗೆ ಎಷ್ಟು ಬೆಲೆ ಎಂದು ನನಗೆ ಗೊತ್ತಿಲ್ಲ.

3. ಮೃತ ವಾದಿ ಬಡ್ಡಿಗೋಸ್ಕರ ಸಾಲ ಕೊಡುವ ವ್ಯವಹಾರ ಮಾಡುತ್ತಿದ್ದ ಮತ್ತು ಪ್ರತಿವಾದಿಗೆ 1 ಲಕ್ಷ ಸಾಲ ಕೊಟ್ಟಿದ್ದ ಎಂದರೆ

ಸರಿಯಲ್ಲ. ಮೃತ ವಾದಿ ದಾವ ಆಸ್ತಿಯನ್ನು ದಿಃ 11.04.2011 ರಂದು ಖರೀದಿ ಕರಾರು ಮಾಡಿಕೊಂಡಿದ್ದಾನೆ. 2 ಲಕ್ಷ ರೂಪಾಯಿಗೆ ಖರೀದಿ ಮಾಡಲು ಕರಾರು ಮಾಡಿಕೊಂಡಿದ್ದ. ಸದರಿ ಕರಾರನ್ನು ಸಾತನೂರುನಲ್ಲಿ ಬರೆಯಲಾಯಿತು. ಪತ್ರ ಬರೆದಾಗ ನಾನು ಇರಲಿಲ್ಲ. ಮುಂಗಡ ಹಣ ಎಂದು 1 ಲಕ್ಷ 55 ಸಾವಿರ ರೂ ಕೊಟ್ಟಿದ್ದ. ಹಣ ಕೊಟ್ಟಾಗ ನಾನು ಇರಲಿಲ್ಲ ಸಾಕ್ಷಿ ಮುಂದುವರಿದು ಮೃತ ವಾದಿ ಮತ್ತು ನನ್ನ ಗಂಡ ಇದ್ದರು. ಬಾಕಿ ಹಣ 45 ಸಾವಿರ ರೂ ಹಣವನ್ನು 2 ವರ್ಷ ದಲ್ಲಿ ಕೊಡಬೇಕೆಂದು ಕರಾರು ಆಗಿತ್ತು. ಕರಾರು ಆಗುವ ಮೊದಲು ನಾನು ಮತ್ತು ಮೃತ ವಾದಿ ಹಾಗೂ ನನ್ನ ಗಂಡ ಮನೆಯಲ್ಲಿ ಕೂತು ಕರಾರಿನ ಬಗ್ಗೆ ಮಾತನಾಡಿದ್ದರಿಂದ ನನಗೆ ಈ ವ್ಯವಹಾರದ ಬಗ್ಗೆ ಗೊತ್ತು. ಮನೆಯಲ್ಲಿ ಆ ರೀತಿ ಮಾತನಾಡುವಾಗ ನನ್ನ ಗಂಡನ ತಮ್ಮ ಸ್ವಾಮಿ ಎನ್ನುವವರು ಇದ್ದರು. ಸ್ವಾಮಿ ಎನ್ನುವವರು ಬಿಟ್ಟು ಬೇರೆ ಯಾರು ಇರಲಿಲ್ಲ ಎಂದರೆ ಸರಿ. ನಿಪಿ-1 ಪತ್ರವನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ- 1 ಪತ್ರಕ್ಕೆ ರಾಮೇಗೌಡ , ಮಂಜು ಮತ್ತು ತೋಟದಹಳ್ಳಿ ನಾರಾಯಣರವರು ಸಾಕ್ಷಿ ಎಂದು ಸಹಿ ಮಾಡಿದ್ದಾರೆ. ಮಂಜು ಎನ್ನುವವನ್ನು ನನ್ನ ಮಗ ಕರೆದುಕೊಂಡು ಬಂದಿದ್ದ, ರಾಮೇಗೌಡರವರೇ ಆಸ್ತಿ ಬರೆದುಕೊಟ್ಟಿದ್ದು. ನಾನು ಉಪನೊಂದಣಾಧಿ ಕಚೇರಿಗೆ ಹೋಗಿರುವುದಿಲ್ಲ.

3. ನನ್ನ ಗಂಡ ಹೈ ಸ್ಕೂಲ್ ನಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಶಾಲೆಯಲ್ಲಿ ನೀಡುವ ಮಧ್ಯಾಹ್ನದ ಊಟದಲ್ಲಿ ಅವ್ಯವಹಾರ ಮಾಡಿದ್ದರು ಎಂದು ಕೆಲಸದಿಂದ ವಜಾ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ 60 ವರ್ಷ ಆಗುವವರೆಗೂ ಕೆಲಸ ಮಾಡಿ ನಿವೃತ್ತಿ ಆಗಿದ್ದಾರೆ. ನನ್ನ ಗಂಡನಿಗೆ 60 ವರ್ಷ ಆಗುವುದಕ್ಕಿಂತ ಮೊದಲೆ ಕೆಲಸದಿಂದ ವಜಾ ಮಾಡಿದ್ದರಿಂದ ಅವರು ಪೆಟ್ರೋಲ್ ಬಂಕ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ.

4. 1 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದಕ್ಕೆ ಭದ್ರತೆಗಾಗಿ ಖಾಲಿ ಛಾಪಾ ಕಾಗದದಲ್ಲಿ 1ನೇ ಪ್ರತಿವಾದಿಯ ಸಹಿ ಪಡೆದುಕೊಂಡು ನಿಪಿ-1ನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ಪತ್ರ ಆಗುವ ಕಾಲಕ್ಕೆ 1ಲಕ್ಷ 55 ಸಾವಿರ ಮುಂಗಡ ಹಣವನ್ನು ಮೃತ ವಾದಿ ಪ್ರತಿವಾದಿಗೆ ಕೊಟ್ಟಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಿಃ 02.04.2009 ರಂದು ಕ್ರಯದ ಕರಾರುಪತ್ರ ನನ್ನ ಮಗನ ಹೆಸರಿಗೆ ಆಗಿತ್ತು ಎಂದರೆ ಸರಿಯಲ್ಲ. ಆ ಕರಾರಿನ ಬಗ್ಗೆ ನನಗೆ ಗೊತ್ತಿಲ್ಲ. ದಿಃ 02.04.2009 ರಂದು ಆಗಿರುವ ಕರಾರಿನ ಮೇಲೆ ಯಾವುದೇ ದಾವೆ ದಾಖಲಿಸಿಲ್ಲ.

5. 3ನೇ ಪ್ರತಿವಾದಿಗೆ ಎಷ್ಟು ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ- 1 ಕರಾರು ಆದಾಗ 3ನೇ ಪ್ರತಿವಾದಿ 18 ವಯಸ್ಸು ಕ್ಕಿಂತ ಮೇಲೆ ಆಗಿತ್ತು ಎಂದರೆ ಸರಿಯಲ್ಲ. 3ನೇ ಪ್ರತಿವಾದಿಗೆ 18 ವಯಸ್ಸಿಗಿಂತ ಮೇಲಾಗಿದ್ದರೂ ನಿಪಿ-1 ನ್ನು ಸೃಷ್ಟಿ ಮಾಡಿದ್ದರು ಆಕೆಯನ್ನು ಅಲ್ಪ ವಹಿ ಎಂದು ತೋರಿಸಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಯಾವ ದಿನಾಂಕದಂದು ನೋಟೀಸ್ ಕಳುಹಿಸಿದ್ದೆವು ಎಂದು ನನಗೆ ನೆನಪಿಲ್ಲ. ಪ್ರತಿವಾದಿಯರಿಗೇ ನೋಟೀಸ್ ಕಳುಹಿಸಿದ್ದ ಬಗ್ಗೆ ಅಂಚೆ ರಸೀದಿಯನ್ನು ಹಾಜರು ಮಾಡಿದ್ದೇವೆ. ನಿಪಿ-2 ನೋಟೀಸನ್ನು ಪ್ರಕರಣದ ಸಲುವಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಭದ್ರತೆಗಾಗಿ ಸಹಿ ಮಾಡಿ ಕೊಟ್ಟಿದ್ದನ್ನು ಕರಾರು ಪತ್ರ ಎಂದು ಸೃಷ್ಟಿ ಮಾಡಿಕೊಂಡಿದ್ದರಿಂದ ಕ್ರಯ ಪತ್ರ ಮಾಡಿಕೊಡಲು ಪ್ರತಿವಾದಿಯರು ಭಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

6. ಬಾಕಿ ಹಣ ನಮ್ಮ ಬಳಿ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಸ್ಟೆಟ್ ಮೆಂಟ್ ಹಾಜರು ಮಾಡಿರುವುದಿಲ್ಲ. ದಾವಾ ಆಸ್ತಿಯನ್ನು 2 ಲಕ್ಷ ರೂಪಾಯಿಗೆ ಪ್ರತಿವಾದಿಯರು ಮಾರಾಟ ಮಾಡಲು ಇಷ್ಟವಿರುವುದಿಲ್ಲ ಅದರ ಬೆಲೆ 6 ಲಕ್ಷಕ್ಕಿಂತ ಹೆಚ್ಚು ಇದ್ದು ನಿಪಿ-1 ನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಕರಾರಿಗೆ ಸಹಿ ಮಾಡದೇ ಇರುವುದರಿಂದ ಮತ್ತು ನಿಪಿ- 1 ನ್ನು ಸೃಷ್ಟಿ ಮಾಡಿದ್ದರಿಂದ ಈ ದಾವೆ ವಜಾ ಮಾಡಬೇಕು ಎಂದರೆ ಸರಿಯಲ್ಲ.

ಕರಾರು ಆದಾಗ ಮತ್ತು ಮಾತುಕತೆ ಆದಾಗ ನಾನು ಇಲ್ಲದೇ ಇದುದದರಿಂದ ಬೇರೆಯವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ ಕನಕಪುರ.**